(ಇಂದು ದಿನಾಂಕಃ 20-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್.ಆರ್.ಬಿ. ವಕೀಲರಿಂದಃ**

ವಾದಿಯ ಗಂಡ ನೌಕರಿಯಲ್ಲಿ ಇದ್ದರು ಎಂದರೆ ಸರಿ. ವಾದಿಯ ಗಂಡ ಗೋವಾದಲ್ಲಿ ಇದ್ದಷ್ಟು ಸಮಯ ವಾದಿ ಅವಳ ಗಂಡನೊಂದಿಗೆ ಗೋವಾದಲ್ಲಿ ವಾಸವಾಗಿದ್ದಳು ಎಂದರೆ ಸಾಕ್ಷಿ ನಡುವೆ ಬಿಟ್ಟು ಬಂದಿದ್ದಳು ಎಂದು ಹೇಳುತ್ತಾರೆ. ಮೊದಲು ವಾದಿ ದಾವಾ ಸ್ವತ್ತಿನಲ್ಲಿ ಇರುವಂತಹ ಮನೆಯಲ್ಲಿ ಬಂದು ವಾಸವಾಗಿದ್ದರು ಎಂದರೆ ಸಾಕ್ಷಿ ಯಾವಾಗಾದರೂ ಬಂದು ಹೋಗುತ್ತಿದ್ದರು ಎಂದು ಹೇಳುತ್ತಾರೆ. 2020 ರಲ್ಲಿ ವಾದಿಯ ಗಂಡ ನೌಕರಿ ಬಿಟ್ಟು ಬಂದಿದ್ದಾರೆ ಎಂದರೆ ಸರಿ. ನಾನು ದಾಂಡೇಲಿಯ ವೆಸ್ಟ ಕಾಸ್ಟ ಪೇಪರ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಕಳೆದ 25 ವರ್ಷದಿಂದ ಇವತ್ತಿನವರೆಗೂ ಅಲ್ಲಿಯೇ ಕೆಲಸ ಮಾಡುತ್ತಿದ್ದೇನೆ. ನನಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ವಾದಿಯ ಗಂಡ ಕೆಲಸಕ್ಕೆ ರಾಜೀನಾಮೆ ಕೊಟ್ಟ ನಂತರ ವಾದಿ ಮತ್ತು ವಾದಿಯ ಗಂಡ ದಾವಾಸ್ವತ್ತಿನಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ವಾದಿಯ ಗಂಡ ಮಾತ್ರ ವಾಸವಾಗಿದ್ದರು ಎಂದು ಹೇಳುತ್ತಾರೆ. ವಾದಿಯ ಗಂಡನೊಂದಿಗೆ ವಾದಿ ದಾವಾ ಸ್ವತ್ತಿನ ಒಂದು ಭಾಗದಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ವಾದಿ ಮತ್ತು ವಾದಿಯ ಗಂಡ ದಾವಾಸ್ವತ್ತಿನ ಒಂದು ಭಾಗದಲ್ಲಿ ವಾಸವಾಗಿದ್ದರು ಎಂದು ಬರೆಸಿದ್ದೇನೆ ಎಂದರೆ ಸಾಕ್ಷಿ ಅಣ್ಣ ಒಬ್ಬನೇ ಇದ್ದ ಎಂದು ಬರೆಸಿದ್ದೇನೆ ಅನ್ನುತ್ತಾರೆ. ವಾದಿಗೆ ಸಂಬಂಧಪಟ್ಟಂತಹ ಪೀಠೋಪಕರಣಗಳು, ಗೃಹೋಪಯೋಗಿ ವಸ್ತುಗಳು ಅದೇ ಮನೆಯಲ್ಲಿ ಇದ್ದು ಅದಕ್ಕೆ ನಾವು ಬೀಗ ಹಾಕಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಗಂಡನಿಗೆ ಸಂಬಂಧಪಟ್ಟ ಬೇರೆ ಯಾವುದೇ ಗೃಹೋಪಯೋಗಿ ವಸ್ತುಗಳು ಇರಲಿಲ್ಲ, ನಾವೆಲ್ಲರೂ ಒಟ್ಟಿಗೆ ಇದ್ದೆವು ಎಂದು ಹೇಳುತ್ತಾರೆ.

ನಮ್ಮ ತಂದೆ 2023 ರಲ್ಲಿ ಮೃತಪಟ್ಟಿದ್ದಾರೆ. ನಿಖರವಾದ ತಾರೀಖು ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದಾಗ ಅವರ ಹೆಸರಿನಲ್ಲಿ ಆಸ್ತಿಗಳು ಇದ್ದವು ಎಂದರೆ ಸರಿ. ನಮ್ಮ ತಂದೆ ಮೃತಪಟ್ಟ ನಂತರ ವಾರಿಸಾ

ಆಧಾರದ ಮೇಲೆ ನಮ್ಮ ಹೆಸರಿಗೆ ಆಸ್ತಿಗಳನ್ನು ವರ್ಗಾವಣೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ತಂದೆ ಬದುಕಿದ್ದಾಗ ನಾಲ್ಕೂ ಜನರಿಗೂ ಆಸ್ತಿಗಳನ್ನು ಸಮಾನವಾಗಿ ಕೊಟ್ಟಿದ್ದಾರೆ. ವಾರಿಸಾ ಮಾಡಿಕೊಳ್ಳುವಾಗ ಕಂದಾಯ ಇಲಾಖೆಯಲ್ಲಿ ವಂಶಾವಳಿ ಕೊಡಬೇಕಾಗುತ್ತದೆ ಎಂದರೆ ಸರಿ. ಜೀವಿತ ಸದಸ್ಯರ ಪ್ರಮಾಣಪತ್ರವನ್ನು ಚರಾಸ್ತಿಗಳಿಗೂ ಸಹ ಕೊಡಬೇಕಾಗುತ್ತದೆ ಎಂದರೆ ಸರಿ. ವಂಶಾವಳಿ ಅಥವಾ ಜೀವಿತ ಸದಸ್ಯರ ಪ್ರಮಾಣಪತ್ರವನ್ನು ನಾವು ಬ್ಯಾಂಕಿಗೆ ಕೊಟ್ಟಿಲ್ಲ. ಸಾಮಾನ್ಯವಾಗಿ ಮೃತಪಟ್ಟ ವ್ಯಕ್ತಿಗೆ ಅವರ ಮಕ್ಕಳು, ಮೊಮ್ಮಕ್ಕಳು ವಾರಿಸುದಾರರಾಗುತ್ತಾರೆ ಎಂದರೆ ಸರಿ. ಜಮೀನಿನ ಮಾಲಿಕ ಮೃತಪಟ್ಟರೆ ಆತನ ಸರಳ ವಾರಿಸುದಾರರು ಜಮೀನಿನ ಮಾಲಿಕರಾಗುತ್ತಾರೆ ಎಂದರೆ ಸರಿ. ವಾದಿಯ ಗಂಡ ಮೃತಪಟ್ಟ ನಂತರ ಅವಳ ಗಂಡನಿಗೆ ಸಂಬಂಧಪಟ್ಟ ಆಸ್ತಿಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾಳೆ ಎಂದರೆ ಸರಿ, ಸಾಕ್ಷಿ ಮುಂದುವರಿದು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾಳೆ ಎಂದು ಹೇಳುತ್ತಾರೆ. ವರ್ಗಾವಣೆ ಮಾಡಿಕೊಳ್ಳುವಾಗ ಕಂದಾಯ ಇಲಾಖೆಯವರು ನೋಟಿಸನ್ನು ಕೊಡುತ್ತಾರೆ ಎಂದರೆ ಸರಿ. ವಾರಿಸಾ ಆಧಾರದ ಮೇಲೆ ಹಕ್ಕು ಬದಲಾವಣೆಯಾದಾಗ ಯಾವುದೇ ನೋಂದಾಯಿತ ದಾಖಲೆ ಬೇಕಾಗಿಲ್ಲ ಎಂದರೆ ಸರಿ. ವಾದಿಯ ಗಂಡನಿಗೆ ಸಂಬಂಧಪಟ್ಟಂತಹ ಆಸ್ತಿಗಳಿಗೆ ಅವಳೊಬ್ಬಳೇ ಹಕ್ಕುದಾರಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ವಾದಿಯ ಗಂಡ ನಮಗೆ ಮೃತ್ಯುಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅಮದಳ್ಳಿ ಗ್ರಾಮದ ಸ.ನ. 310 ಪೈಕಿ 10 ಗುಂಟೆ ವಾದಿಯ ಗಂಡ ಜೀವಿತವಿದ್ದಾಗ ಪೋಡಿ ಮಾಡಿಕೊಂಡು ಬೇರೆ ಹಿಸ್ಸೆ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಹಿಸ್ಸೆ ಹಕ್ಕು ಬದಲಾವಣೆಯ ಆಧಾರದ ಮೇಲೆಯೇ ಆಗಿದೆ ಎಂದರೆ ಸರಿ. ಅಮದಳ್ಳಿ ಗ್ರಾಮದ ನಂ. 310 ಹಿಸ್ಸಾ 1ಕ ಇದ್ದದ್ದು, ಈಗ ಪ್ರತ್ಯೇಕ ಹಿಸ್ಸಾ 310/17 ಕ್ಷೇತ್ರ 2 ಗುಂಟೆ 1 ಆಣೆ ಆಗಿದೆ ಎಂದರ ಸರಿ. ನಮ್ಮ ತಂದೆ ಇದ್ದಾಗ ಸದರಿ ಜಮೀನಿಗೆ ಪ್ರತ್ಯೇಕ ನಕ್ಷೆ ಮತ್ತು ಪ್ರತ್ಯೇಕ ಪಹಣಿ ಆಗಿದೆ ಎಂದರೆ ಸರಿ. ಸ.ನಂ. 310/1ಕ1 ಈಗ 1 ಗುಂಟೆ 12 ಆಣೆ ರಸ್ತೆ ಬಿಟ್ಟ ಬಗ್ಗೆ ನಮ್ಮ ತಂದೆ ಮತ್ತು ನಮ್ಮ ಹೆಸರಿನಲ್ಲಿ ಜಂಟಿಯಾಗಿ ಇದೆ ಎಂದರೆ ಸಾಕ್ಷಿ ನಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.3 ರಲ್ಲಿ ಹೇಳಿರುವ ರಾಷ್ಟ್ರೀಯ ಹೆದ್ದಾರಿಗಾಗಿ ಭೂಸ್ವಾಧೀನಗೊಂಡ 12 ಆಣೆ ಕ್ಷೇತ್ರ ಜಮೀನು, ಮನೆ, ಫಲಕೊಡುವ ತೆಂಗಿನಮರಗಳು, ಆವರಣ ಗೋಡೆ ಇತ್ತು ಎಂದರೆ ಸಾಕ್ಷಿ ಆವರಣ ಮಾತ್ರ ಭೂಸ್ವಾಧೀನಗೊಂಡಿದೆ ಎಂದು ಹೇಳುತ್ತಾರೆ. ಸ್ವಾಧೀನಗೊಂಡಂತಹ ಆಸ್ತಿಗೆ ಸಂಬಂಧಪಟ್ಟಂತಹ ಭೂಸ್ವಾಧೀನ ಅಧಿಕಾರಿಗಳು ಪರಿಹಾರಧನ ಮಂಜೂರು ಮಾಡಿದ್ದಾರೆ ಎಂದರೆ ಸರಿ. ಪರಿಹಾರ ಘೋಷಣೆಯಾದ ದಾಖಲಾತಿಗಳು ಇವೆ ಎಂದರೆ ಸಾಕ್ಷಿ ನಮ್ಮ ತಂದೆ ಬಳಿ ಇದ್ದವು ಎಂದು ಹೇಳುತ್ತಾರೆ. ಸದರಿ ದಾಖಲಾತಿಗಳು ನಮ್ಮ ಬಳಿ ಇವೆ ಎಂದರೆ ಸರಿಯಲ್ಲ. ಎಷ್ಟು ಪರಿಹಾರ ನಿಗದಿಯಾಗಿತ್ತು ಮತ್ತು ಎಷ್ಟು ಕೊಟ್ಟಿದ್ದಾರೆ ಎಂದು ತೋರಿಸಲು ಅದು ಒಂದು ದಾಖಲೆ ಎಂದರೆ ಸರಿ. ಪರಿಹಾರ ಧನ ಇಂತಿಷ್ಟು ಹಣ ನಿಗದಿಯಾಗಿತ್ತು ಮತ್ತು ಇಂತಿಷ್ಟು ಹಣ ಪಡೆದುಕೊಂಡಿದ್ದೇನೆ ಎಂದು ಹೇಳುವ ದಾಖಲಾತಿ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ.

ನೌಕಾನೆಲೆಗೆ ಭೂಸ್ವಾಧೀನಗೊಂಡ ಆಸ್ತಿಯಿಂದ ಎಷ್ಟು ಪರಿಹಾರ ಧನ ಬಂದಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಪರಿಹಾರ ಧನದಲ್ಲಿ ಯಾರಿಗೆ ಎಷ್ಟು ಕೊಡಬೇಕು ಅಷ್ಟು ಕೊಟ್ಟಿದ್ದಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಮ್ಮ ತಂದೆ ನನಗೆ ರೂ. 6,00,000-00 ಹಣ ಮತ್ತು ಇನ್ನೊಮ್ಮೆ ರೂ. 1,00,000-00 ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಒಟ್ಟೂ 7-8 ಲಕ್ಷ ರೂಪಾಯಿಗಳನ್ನು ಎಲ್ಲರಿಗೂ ಸಹ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನೌಕಾ ನೆಲೆಗೆ ಭೂಸ್ವಾಧೀನಗೊಂಡ ನಮ್ಮ ಜಮಿನಿಗೆ ಸಂಬಂಧಪಟ್ಟಂತೆ ಪರಿಹಾರ ಧನ ನಿಗದಿಯಾಗಿದ್ದರ ಬಗ್ಗೆ ಮತ್ತು ನಮಗೆ ಹಣ ಬಿಡುಗಡೆ ಮಾಡಿದ್ದರ ಬಗ್ಗೆ ದಾಖಲಾತಿಗಳು ಭೂಸ್ವಾಧೀನ ಅಧಿಕಾರಿಗಳ ಕಚೇರಿಯಿಂದ ತೆಗದುಕೊಂಡು ಬಂದು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ವಾದಿಗೆ ನಮ್ಮ ತಂದೆಯವರು ಪರಿಹಾರ ಧನದಲ್ಲಿ ಎಷ್ಟು ಹಣ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಗೆ ಯಾವುದೇ ಹಣ ಕೊಡದೇ ಇದ್ದರೂ ಸಹ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಿತವಿದ್ದಾಗ ಆಸ್ತಿಗಳ ವ್ಯವಹಾರವನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ.

ಭೂಸ್ವಾಧೀನಗೊಂಡ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮ್ಮ ತಂದೆಯವರೇ ನೋಡಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾನು, ನನ್ನ ಸಹೋದರರು ಮತ್ತು ನಮ್ಮ ತಂದೆ ಸೇರಿ ಮನೆಯನ್ನು ಕಟ್ಟಿದ್ದೇವೆ ಎಂದರೆ ಸರಿ. ಆ ಮನೆಯ ಒಂದು ಭಾಗದಲ್ಲಿ ವಾದಿ ಮತ್ತು ಅವರ ಗಂಡನಿಗೆ ಸೇರಿ ವಾಸ ಮಾಡಲು ಕೊಟ್ಟಿದ್ದರು ಎಂದರೆ ಸರಿ. ವಾದಿ ತನ್ನ ಗಂಡನನ್ನು ಬಿಟ್ಟು ಹೋಗಿದ್ದಳು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ. ವಾದಿಯ ಗಂಡನ ಆರೋಗ್ಯವನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು, ನಾವು ಯಾರೂ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡನನ್ನು 2018 -2019 ರಲ್ಲಿ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಆ ರೀತಿ ವಾದಿಯ ಗಂಡನಿಗೆ ನಾವು ಯಾವುದೇ ಚಿಕಿತ್ಸೆ ನೀಡಿರಲಿಲ್ಲ ಅನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 6 ನೇ ಪ್ಯಾರಾದಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ವಾದಿಯ ಗಂಡ ಗೋವಾದಲ್ಲಿ ಕೆಲಸಕ್ಕೆ ಇದ್ದಾಗ ತಿಂಗಳಿಗೆ ರೂ. 20,000-00 ಸಂಬಳ ಇದ್ದು, ಮದುವೆಯಾದ ನಂತರ ಹೆಚ್ಚಿನ ವೇತನ ಪಡೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಹಾಕಿದಂತಹ ಕ್ರಿಮಿನಲ್ ಮಿಸ್‌ಲೇನಿಯಸ್ ಕೇಸಿನ ನೋಟಿಸ್ ಬಂದ ದಿನಾಂಕ ಹೇಳಲು ಬರುವುದಿಲ್ಲ. ಸದರಿ ಕೇಸನ್ನು ದಾಖಲಿಸಿದ ದಿನಾಂಕ ಹೇಳಲು ಬರುವುದಿಲ್ಲ. ನಾನು ಮತ್ತು ನಮ್ಮ ಕುಟುಂಬದವರು ವಾದಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದರಿಂದ ಅವರು ಕ್ರಿ.ಮಿಸ್. ನಂ. 79/2019 ರಿಂದು ದಿನಾಂಕ 03-04-2019 ರಂದು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸನ್ನು ಪ್ರತಿವಾದಿ ನಂ.1 ರಿಂದ 4, ನನ್ನ ತಾಯಿ, ನನ್ನ ಸಹೋದರಿ - ಸುಲಕ್ಷಾ, ನನ್ನ ಹೆಂಡತಿ - ಪಲ್ಲವಿ ರವರ ವಿರುದ್ಧ ದೂರನ್ನು ದಾಖಲಿಸಿದ್ದು ನಾವು ಸದರಿ ಪ್ರಕರಣದಲ್ಲಿ ಹಾಜರಾಗಿದ್ದೆವು ಎಂದರೆ ಸರಿ. ದಿನಾಂಕ 23-05-2019 ರಂದು ನಾವು ವಾದಿಗೆ ತೊಂದರೆ ಕೊಡುವುದಿಲ್ಲ ಎಂದು ಹೇಳಿ ರಾಜಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ದಿನಾಂಕ 27-05-2019 ರಂದು ನಾವೆಲ್ಲರೂ ಮುಚ್ಚಳಿಕೆ ಬರೆದುಕೊಟ್ಟ ನಂತರ ವಾದಿ ಕೇಸನ್ನು ಮರಳಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿ ನಮ್ಮ ಮನೆಯಲ್ಲಿ ವಾಸವಿದ್ದಾಗ ಸದರಿಯವರಿಗೆ ಮಕ್ಕಳಾಗಿಲ್ಲ, ವಾರಿಸುದಾರರು ಇಲ್ಲ ಎಂದು ಮಾನಸಿಕವಾಗಿ

ಹಾಗೂ ದೈಹಿಕವಾಗಿ ಹಿಂಸೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆಯವರು ವಾದಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಗಂಡ ಅದನ್ನು ತಪ್ಪಿಸಲು ಕಾರವಾರದಲ್ಲಿ ಬಾಡಿಗೆ ಮನೆ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ತೊಂದರೆ ಕೊಟ್ಟಿದ್ದರಿಂದ ವಾದಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದವರು ನಮ್ಮನ್ನು ಕರೆದು ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಬರೆದುಕೊಟ್ಟಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಿ ಮಿಸ್. ನಂ. 79/2019 ರಲ್ಲಿ  ಹಾಕಿದ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಸದರಿ ಅರ್ಜಿಯಲ್ಲಿ ತನಗೆ ಪರಿಹಾರ ಧನ ಕೊಟ್ಟಿಲ್ಲ ಮತ್ತು ಆಸ್ತಿಯನ್ನು ವಹಿವಾಟು ಮಾಡಲು ತೊಂದರೆ ಕೊಟ್ಟಿದ್ದರು ಎಂದು ಬರೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಅಣ್ಣ, ಶಿವಾನಂದ ನಾಯ್ಕು, ಮಧುಕರ ನಾಯ್ಕು ಅರ್ಗಾ, ದೀಪಕ ನಾಯ್ಕು, ನಂದನಗದ್ದಾ, ಕಾರವಾರ ಇವರ ಸಮಕ್ಷಮದಲ್ಲಿ ಪಂಚಾಯತಿಯಾಗಿ ಬರವಣಿಗೆಯಲ್ಲಿ ಬರೆದುಕೊಟ್ಟಿದ್ದೆವು ಎಂದರೆ ಸಾಕ್ಷಿ ನಮ್ಮ ಅಣ್ಣನಿಂದ ಒತ್ತಾಯಪೂರ್ವಕವಾಗಿ ಬರೆಸಿಕೊಂಡಿದ್ದರು ಎಂದು ಹೇಳುತ್ತಾರೆ. ವಾದಿಗೆ ಮತ್ತು ಕುಟುಂಬದ ಸದಸ್ಯರಿಗೆ ಕೌಟುಂಬಿಕ ಕಲಹದಿಂದ ಮನಸ್ತಾಪವಾದ ಕಾರಣ ನಾನು, ನನ್ನ ಹೆಂಡತಿ ಸ್ನೇಹಾಳೊಂದಿಗೆ ಕಾರವಾರದಲ್ಲಿ ಮನೆ ಮಾಡಿ ವಾಸಿಸಲು ಬಯಸಿರುತ್ತೇನೆ. ಕಾರವಾರದಲ್ಲಿ ಬಾಡಿಗೆ ಮನೆ ಮಾಡಿ ತನ್ನ ಹೆಂಡತಿಯೊಂದಿಗೆ ಯಾವುದೇ ತಂಟೆ ತಕರಾರು ಮಾಡದೇ ಅವಳಿಗೆ ಮಾನಸಿಕವಾಗಿ ಹಿಂಸೆ ಕೊಡದೇ ಅನ್ಯೋನ್ಯವಾಗಿ ಇರಲು ಬಯಸುತ್ತೇನೆ ಎಂದು ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 7 ನೇ ಪ್ಯಾರಾದಲ್ಲಿ ದಾವೆ ಹಾಕಿದ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ 26-09-2021 ರಂದು ಮೃತಪಟ್ಟಿದ್ದಾರೆ ಎಂದರೆ ಸರಿ. ವಾದಿಯ ಗಂಡನಿಗೆ ಬಂದಂತಹ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾವು ಅಸಲು ದಾವೆ ಸಂಖ್ಯೆ 118/2022 ನ್ನು ದಿನಾಂಕ 20-06-2022 ರಂದು ಹಾಕಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು ದಿನಾಂಕ 27-06-2022 ರಂದು

ಹಾಕಿದ್ದಾರೆ ಎಂದರೆ ಸರಿ. ದಿನಾಂಕ 13-07-2022 ರಂದು ಈ ನ್ಯಾಯಾಲಯದಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಮನ್ಸನ್ನು ನಾವು ನಿರಾಕರಿಸಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 03-08-2022 ರಂದು ನಾವು ಹಾಜರಾಗದೇ ಇದ್ದಾಗ ನ್ಯಾಯಾಲಯ ನಮ್ಮನ್ನು ಏಕಪಕ್ಷೀಯ ಎಂದು ಆದೇಶ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ.ದಿನಾಂಕ23-09-2022 ರಂದು ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅಸಲು ದಾವೆ ನಂ. 118/2022 ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಮತ್ತು ನಮ್ಮ ವಕೀಲರು ಹಾಜರಾಗುತ್ತಿದ್ದೆವು ಎಂದರೆ ಸರಿ. ದಿನಾಂಕ 08-12-2022 ರಂದು ಅಂತಿಮ ಡಿಕ್ರಿಗಾಗಿ ವಾದಿ ಅರ್ಜಿ ಸಲ್ಲಿಸಿದ್ದಾಳೆ ಎಂದರೆ ಸರಿ. ದಿನಾಂಕಃ 06-01-2023 ರಂದು ನಾನು ಅಂತಿಮ ಡಿಕ್ರಿ ಅರ್ಜಿಯಲ್ಲಿ ಹಾಜರಾಗಿದ್ದೇನೆ ಎಂದರೆ ಸರಿ. ಅಂತಿಮ ಡಿಕ್ರಿ ಅರ್ಜಿಯಲ್ಲಿ ನಾನು ಹಾಜರಾಗದೇ ಇದ್ದುದರಿಂದ ನನ್ನನ್ನು ಏಕಪಕ್ಷಿಯವಾಗಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ನೋಟಿಸ್ ಬಂದಿಲ್ಲ ಎಂದು ಹೇಳುತ್ತಾರೆ. ದಿನಾಂಕ 16-03-2023 ರಂದು ಸರ್ವೆ ಇಲಾಖೆಯವರು ಜಮೀನಿನ ಅಳತೆಗಾಗಿ ಬರುತ್ತೇವೆ ಎಂದು ನೋಟಿಸನ್ನು ಕೊಟ್ಟಿದ್ದರು ಎಂದರೆ ಸರಿ. ದಿನಾಂಕ 20-07-2023 ರಂದು ಕಂದಾಯ ಇಲಾಖೆಯಲ್ಲಿ ಪೋಡಿ ಮಾಡಲು ಹಣವನ್ನು ಕಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಈ ಎಲ್ಲಾ ಪ್ರಕರಣಗಳಲ್ಲಿ ಒಬ್ಬರು ಇಲ್ಲವಾದರೆ ಇನ್ನೊಬ್ಬರು ನ್ಯಾಯಾಲಯದ ಮುಂದೆ ಹಾಜರು ಇರುತ್ತಿದ್ದರೂ ಸಹ ನಮಗೆ ವೈಯಕ್ತಿಕವಾಗಿ ನೋಟಿಸ್ ಕೊಡದ್ದರಿಂದ ಅನ್ಯಾಯವಾಗಿದೆ ಎಂದು ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆವು ಎಂದರೆ ಸರಿ. ನಂತರ ಸದರಿ ಮೇಲ್ಮನವಿ ವೆಚ್ಚಗಳೊಂದಿಗೆ ಪುರಸ್ಕೃತಗೊಂಡು ಈ ನ್ಯಾಯಾಲಯಕ್ಕೆ ಮರಳಿ ಬಂದಿದೆ ಎಂದರೆ ಸರಿ. ವಾದಿ ಈ ದಾವೆ ಹೂಡಲು ಯಾವುದೇ ಕಾರಣ ಇಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 13-06-2022 ರಂದು ವಾದಿ ಭಾಗ ಕೊಡಲು ಕೇಳಿದಾಗ ನಾವು ದಿನಾಂಕ 20-06-2022 ರಂದು ನಾನು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ¼ ಭಾಗ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ